# 'ಸಮನ್ವಯದ ಕೆರೆ ಸಂರಕ್ಷಣೆ ಯೋಜನೆ ಜಾರಿಯಾಗಲಿ'

ಪ್ರಜಾವಾಣಿ ವಾರ್ತೆ

ಶಿರಸಿ: 'ಅಭಿವೃದ್ಧಿ ಯೋಜನೆಗಳು ಉತ್ತರ ಕನ್ನಡ ಜಿಲ್ಲೆಯ ಕಾಡನ್ನು ನುಂಗಿವೆ. ಕಾಡಿನ ಜಿಲ್ಲೆಯಾಗಿರುವ ಉತ್ತರ ಕನ್ನಡದಲ್ಲಿ ಶೇ 32ರಷ್ಟು ಕಾಡು ಮಾತ್ರ ಉಳಿದುಕೊಂಡಿದೆ' ಎಂದು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ. ಟಿ.ವಿ.ರಾಮಚಂದ್ರ ಹೇಳಿದರು.

ತಾಲ್ಲೂಕಿನ ಸ್ವರ್ಣವಲ್ಲಿಯಲ್ಲಿ ಗುರುವಾರ ನಡೆದ ಪಶ್ಚಿಮಘಟ್ಟದ ಕೆರೆಗಳು ಹಾಗೂ ಜಲಮೂಲಗಳ ಸಂರಕ್ಷಣೆ–ನಿರ್ವಹಣೆ ಕುರಿತ ಕೆರೆ ಸಮ್ಮೇಳನದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

'ನಾಲ್ಕು ದಶಕಗಳ ಹಿಂದೆ ಜಿಲ್ಲೆಯಲ್ಲಿ ಶೇ 65ರಷ್ಟು ಕಾಡು ಇತ್ತು. ಆದರೆ ಕ್ರಮೇಣ ಕಾಡು ಕಣ್ಮರೆಯಾಗುತ್ತಿದೆ. ಜಿಲ್ಲೆಯಲ್ಲಿ ಶೇ 85ರಷ್ಟು ಜನರು ಇಂದಿಗೂ ಕಟ್ಟಿಗೆ ಒಲೆ ಬಳಕೆ ಮಾಡುತ್ತಾರೆ. ಸುಧಾರಿತ ಕಟ್ಟಿಗೆ ಒಲೆಯ ಬಳಕೆಯಿಂದ ಶೇ 40–50ರಷ್ಟು ಕಟ್ಟಿಗೆ ಕಡಿಮೆ ಸಾಕಾಗುತ್ತದೆ. ಮಳೆಗಾಲದ ಮೂರು ತಿಂಗಳು ಹೊರತುಪಡಿಸಿ ಉಳಿದ ಅವಧಿಯಲ್ಲಿ ಸೋಲಾರ್ ಶಕ್ತಿ ಬಳಕೆಗೆ ಯೋಚಿಸಬೇಕು. ಪವನಶಕ್ತಿಯ ಬಳಕೆಯ ಬಗೆಗೂ ಚಿಂತನೆ ನಡೆಸಿದರೆ ಕಾಡಿನ ಮೇಲಿನ ಒತ್ತಡ ಕಡಿಮೆಯಾಗುತ್ತದೆ' ಎಂದರು.

'ಜಿಲ್ಲೆಯ ಪರಿಸರ ಸ್ಥಿತಿ ಅಧ್ಯಯನ ನಡೆಸಿದಾಗ ನೈಸರ್ಗಿಕ ಕಾಡು ಉಳಿದಿರುವ ಪ್ರದೇಶದಲ್ಲಿ ವರ್ಷದ ಎಲ್ಲ ತಿಂಗಳು ನೀರು ಲಭ್ಯವಿದೆ. ನೆಡುತೋಪು ನಿರ್ಮಾಣವಾಗಿರುವ ಪ್ರದೇಶದಲ್ಲಿ 6–9 ತಿಂಗಳು, ಬಂಜರು ಭೂಮಿಯಲ್ಲಿ 4 ತಿಂಗಳು ಮಾತ್ರ ನೀರಿನ ಲಭ್ಯತೆ ಇರುವ ಸಂಗತಿ ತಿಳಿದು ಬರುತ್ತದೆ. ಶರಾವತಿ ನದಿಗೆ ಲಿಂಗನಮಕ್ಕಿ ಅಣೆಕಟ್ಟು ನಿರ್ಮಿಸಿದ ಮೇಲೆ ಈ ಪ್ರದೇಶದ ಮಳೆಯ ಪ್ರಮಾಣದಲ್ಲಿ ವ್ಯತ್ಯಾಸ ಕಂಡು ಬರುತ್ತದೆ. 100 ವರ್ಷಗಳ ಮಳೆಯ ದಾಖಲೆ ಪರಿಶೀಲಿಸಿದಾಗ ಅಣೆಕಟ್ಟು ನಿರ್ಮಾಣಕ್ಕೆ ಪೂರ್ವದಲ್ಲಿ 2500–3500ಮಿ.ಮೀ ಮಳೆಯಾಗುತ್ತಿದ್ದ ಪ್ರದೇಶದಲ್ಲಿ ಇಂದು 1500–2000 ಮಿ.ಮೀ ಮಳೆಯಾಗುತ್ತಿದೆ. ಇದರಿಂದ ಕಾಡು ಮತ್ತು ಮಳೆಯ ನಡುವಿನ ನಂಟು ಅರ್ಥವಾಗುತ್ತದೆ' ಎಂದು ಹೇಳಿದರು.

ಸಭೆಯ ಸಾನ್ನಿಧ್ಯ ವಹಿಸಿದ್ದ ಸ್ವರ್ಣವಲ್ಲಿ ಮಠಾಧೀಶ ಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ ಮಾತನಾಡಿ 'ದೇವರ ಸಾನ್ನಿಧ್ಯ ಹಾಗೂ ಕೆರೆಗಳ ನಡುವೆ ಪವಿತ್ರ ಸಂಬಂಧವಿದೆ. ಕೆರೆ ಕಟ್ಟುವುದು ದೇವಾಲಯ ನಿರ್ಮಿಸಿದಷ್ಟೇ ಪವಿತ್ರ ಕೆಲಸವಾಗಿದೆ' ಎಂದರು.

'ಹೊಸ ಕೆರೆ ನಿರ್ಮಾಣಕ್ಕಿಂತ ಹಾಲಿ ಇರುವ ಕೆರೆಗಳನ್ನು ಉಳಿಸುವ ಕಾರ್ಯ ಆಗಬೇಕು. ಕೆರೆ ಸಂರಕ್ಷಣೆ ದಿಸೆಯಲ್ಲಿ ಎಲ್ಲ ಆಯಾಮಗಳಲ್ಲಿ ಕೆಲಸ ಮಾಡುವ ಜನರನ್ನು ಒಂದೆಡೆ ಸೇರಿಸಿ ಸಮನ್ವಯದಿಂದ ಕೆರೆ ಸಂರಕ್ಷಣೆ ಯೋಜನೆ ಜಾರಿಗೊಳಿಸಬೇಕಾದ ಅಗತ್ಯವಿದೆ. ಕೆರೆ ಸಂರಕ್ಷಣೆಯಿಂದ ಸಂಸ್ಕೃತಿ ರಕ್ಷಣೆ ಸಾಧ್ಯವಾಗುತ್ತದೆ' ಎಂದು ಹೇಳಿದರು.

ಈ ಸಂದರ್ಭದಲ್ಲಿ ಶ್ರೀಗಳು, ಕೆರೆ ಸಂರಕ್ಷಣೆ ಮಾಡಿದ ಸಾಗರ ತಾಲ್ಲೂಕಿನ ಜಿಗಳೆಮನೆ ಗ್ರಾಮ ಅರಣ್ಯ ಸಮಿತಿಯ ಕನ್ನಪ್ಪ ಹಾಗೂ ತಂಡದವರನ್ನು ಸನ್ಮಾನಿಸಿದರು. ಕೇಂದ್ರ ರಾಸಾಯನಿಕ ಮತ್ತು ಗೊಬ್ಬರ ಖಾತೆ ಸಚಿವ ಅನಂತಕುಮಾರ್ ಅವರು ಉತ್ತರ ಕನ್ನಡ ಜಿಲ್ಲೆಯ ಧಾರಣಾ ಸಾಮರ್ಥ್ಯ ಅಧ್ಯಯನದ ವರದಿಗಳನ್ನು ಬಿಡುಗಡೆಗೊಳಿಸಿದರು.

ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಅಧ್ಯಕ್ಷತೆ ವಹಿಸಿದ್ದರು. ವೃಕ್ಷಲಕ್ಷ ಆಂದೋಲನದ ಅಧ್ಯಕ್ಷ ಅನಂತ ಅಶೀಸರ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಜ್ಞಾನಿಗಳಾದ ಆರ್.ಎಸ್.ನಾಯಕ, ಸುಭಾಷ್‌ಚಂದ್ರನ್, ಬೆಂಗಳೂರಿನ ವಾಗ್ದೇವಿ ವಿಲಾಸ ಸಂಸ್ಥೆಯ ಅಧ್ಯಕ್ಷ ಹರೀಶ ಉಪಸ್ಥಿತರಿದ್ದರು.




ಕೆರೆ ಸಂರಕ್ಷಣೆ ಮಾಡಿದ ಸಾಗರ ತಾಲ್ಲೂಕಿನ ಜಿಗಳೆಮನೆ ಗ್ರಾಮ ಅರಣ್ಯ ಸಮಿತಿಯ ಸದಸ್ಯರನ್ನು ಶಿರಸಿ ತಾಲ್ಲೂಕಿನ ಸ್ವರ್ಣವಲ್ಲಿಯಲ್ಲಿ ಗುರುವಾರ ನಡೆದ ಕೆರೆ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸ್ವರ್ಣವಲ್ಲಿ ಶ್ರೀಗಳು ಸನ್ಮಾನಿಸಿದರು. ಅನಂತ ಅಶೀಸರ, ಕೇಂದ್ರ ಸಚಿವ ಅನಂತಕುಮಾರ, ಶಾಸಕ ವಿಶ್ವೇಶ್ವರ ಹೆಗಡೆ ಕಾಗೇರಿ ಇತರರು ಇದ್ದಾರೆ

## ಸಮ್ಮೇಳನದಲ್ಲಿ ಇಂದು

ಕೆರೆ ಸಮ್ಮೇಳನದ ಎರಡನೇ ದಿನ ಶುಕ್ರವಾರ, ಮಕ್ಕಳ ದಿನಾಚರಣೆ ಹಾಗೂ ಗೋಷ್ಠಿಗಳು ಇಲ್ಲಿನ ಲಯನ್ಸ್ ಶಾಲೆಯ ಸಭಾಭವನದಲ್ಲಿ ನಡೆಯಲಿವೆ. ಕೃಷಿ ತಜ್ಞ ಕೆ.ಎಂ. ಹೆಗಡೆ ಭೈರುಂಬೆ ಬೆಳಿಗ್ಗೆ 9.30 ಗಂಟೆಗೆ ಉದ್ಘಾಟಿಸುವರು. ಲಯನ್ಸ್ ಕ್ಲಬ್ ಅಧ್ಯಕ್ಷ ಪ್ರಭಾಕರ ಹೆಗಡೆ ಅಧ್ಯಕ್ಷತೆ ವಹಿಸುವರು. ಉಪಅರಣ್ಯ ಸಂರಕ್ಷಣಾಧಿಕಾರಿ ಯತೀಶಕುಮಾರ, ಡಿಡಿಪಿಐ ಎಂ.ಎಸ್.ಪ್ರಸನ್ನಕುಮಾರ ಭಾಗವಹಿಸುವರು.

ಪ್ರೌಢಶಾಲಾ ಮಕ್ಕಳು ಗ್ರಾಮೀಣ ಕೆರೆಗಳ ಕುರಿತು ನಡೆಸಿದ ಅಧ್ಯಯನ ವರದಿಗಳು ಇಡೀ ದಿನದ ಗೋಷ್ಠಿಯಲ್ಲಿ ಮಂಡನೆಯಾಗಲಿವೆ. ಪಶ್ಚಿಮಘಟ್ಟದ ಜೌಗು ಭೂಮಿ ಪರಿಸ್ಥಿತಿ, ದೇವರ ಕಾಡು, ಧಾರಣಾ ಸಾಮರ್ಥ್ಯ ಕುರಿತು ವಿಶ್ವವಿದ್ಯಾಲಯಗಳು, ಸಂಶೋಧನಾ ಸಂಸ್ಥೆಗಳ ತಜ್ಞರು ಚರ್ಚಿಸಲಿದ್ದಾರೆ.

ಜಿ.ಎಂ. ಭಟ್ಟ ವಾಜಗಾರ ತಂಡದವರು ಯಕ್ಷಗಾನ ಪದ್ಯ ಹಾಡಿದರು. ವಿ.ಎನ್.ಹೆಗಡೆ ಬೊಮ್ನಳ್ಳಿ ಸ್ವಾಗತಿಸಿದರು. ಅನಂತ ಭಟ್ಟ ಹುಳಗೋಳ ಕಾರ್ಯಕ್ರಮ ನಿರೂಪಿಸಿದರು. ಎಂ.ಸಿ. ಹೆಗಡೆ ವಂದಿಸಿದರು.

ನಂತರ ವಿವಿಧ ಗೋಷ್ಠಿಗಳು ನಡೆದವು.